**CCE RR**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2015

**S. S. L. C. EXAMINATION, JUNE, 2015**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 16. 06. 2015 ] ಸಂಕೇತ ಸಂಖ್ಯೆ : **01-K**

Date : 16. 06. 2015 ] CODE NO. : **01-K**

## ವಿಷಯ : ಪ್ರಥಮ ಭಾಷೆ — ಕನ್ನಡ

## Subject : First Language — KANNADA

**( ಹೊಸ ಪಠ್ಯಕ್ರಮ / New Syllabus )**

**( ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater )**

[ ಪರಮಾವಧಿ ಅಂಕಗಳು : 100

[ Maximum Marks : 100

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'** | |
| | **(ಪಠ್ಯಗಳ ಅಧ್ಯಯನ – ಗದ್ಯ, ಪದ್ಯ, ಪೋಷಕ ಅಧ್ಯಯನ)** | |
| | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ (ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | 11 × 1 = 11 |
| 1. | ತಳಿರು ಹೂಗಳು, ಸವಿಯಾದ ಹಣ್ಣು ಹಂಪಲುಗಳು, ಮೊಸರು, ತುಪ್ಪ ನೀರು, ಜೇನುತುಪ್ಪ ಸಕ್ಕರೆ ಮಿಶ್ರಿತವಾದ ಪಾನೀಯ ಮಧುಪರ್ಕವನ್ನು ಸಂಗ್ರಹಿಸಿದ್ದಳು. | |
| 2. | ನಾಡ ಭವ್ಯ ಜನರು ಬುಕ್ಕರಾಯರಿಗೆ ಭಕ್ತರು (ವೈಷ್ಣವ ಭಕ್ತರು) ಮಾಡುವ ಅನ್ಯಾಯಗಳನ್ನು ಭಿನ್ನಹ ಮಾಡಿದರು. | |
| 3. | ಚಾವಣಿಯಿಲ್ಲದ ಗುಡಿಯಲ್ಲಿ ಕಾರುಣ್ಯ ಸಮತೆಯ ಬುದ್ಧನೇ ದೇವರೂರರ ದೇವರು. | |
| 4. | ಧರ್ಮಾಧಿಕರಣರು ವಟವೃಕ್ಷದ ಸಾಕ್ಷಿಯನ್ನು ಕೇಳಲು ವೃಕ್ಷದ ಸಮೀಪಕ್ಕೆ ಬಂದರು. | |
| 5. | ಹಸಿದು ಮಲಗಿದ್ದ ಹುಲಿಯು 'ವಿಧಿಯ ಆಹಾರಕ್ಕೆ ಏನನ್ನು ಒದಗಿಸುವುದೋ' ಎಂದು ಯೋಚಿಸಿತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 6. | ಹಕ್ಕಿಯು ಸಾರ್ವಭೌಮರ ನೆತ್ತಿಯನ್ನು ಕುಕ್ಕಿದೆ. | |
| 7. | ಹಲಗಲಿಯನ್ನು ಲೂಟಿ ಮಾಡಿ ಕೊನೆಗೆ ಬೆಂಕಿಯಿಟ್ಟು ಊರನ್ನೇ ಸುಟ್ಟುದುದರಿಂದ ಗುರುತು ಉಳಿಯದಂತಾಯಿತು. | |
| 8. | ಮಾದ್ರಿಯ ಮಕ್ಕಳು ಅಶ್ವಿನಿ ದೇವತೆಯ ಅನುಗ್ರಹದಿಂದ ಹುಟ್ಟಿದ ನಕುಲ ಸಹದೇವರು. | |
| 9. | ಪಂಪನಿಗೆ ಅವನದೇ ಕಾರಣಗಳು ಇದ್ದಿರಬಹುದಾದುದರಿಂದ ಪಂಪನು ತನ್ನ ಹೆಸರನ್ನು ಕೆತ್ತಲಿಲ್ಲ. | |
| 10. | ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ದೇಶದ ಜನರಿಗೆ ದೇಶದ ಸಂಸ್ಕೃತಿಯ ಅರಿವನ್ನು ನೀಡಿದಾಗ. | |
| 11. | ಪಾರಿವಾಳಗಳು ಇಟ್ಟ ಮೊಟ್ಟೆಗಳು ಒಡೆದು ಮುದ್ದು ಮರಿಗಳ ಮಧುರವಾದ ಸದ್ದನ್ನು ಕೇಳಿದಾಗ ಪಾರಿವಾಳಗಳಿಗೆ ಆನಂದವಾಯಿತು. | |
| | **ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು) :** | $9 \times 2 = 18$ |
| 12. | ಗೊರೂರರು ಶಾಲೆಯನ್ನು ಪ್ರವೇಶಿಸಿದಾಗ ವಿದ್ಯಾರ್ಥಿಗಳು ಭಯಗೊಂಡು ರಕ್ಷಣೆ ಕೋರಿ ಉಪಾಧ್ಯಾಯರ ಬಳಿ ಹೋದರು ಉಪಾಧ್ಯಾಯರು ಕುತೂಹಲದಿಂದ ದೃಷ್ಟಿಸಿದರು. ವಿಚಿತ್ರ ಪ್ರಾಣಿಯೊಂದು ದಾರಿಯಲ್ಲಿ ಹೋಗುತ್ತಿದ್ದರೆ ಹೇಗೋ ಹಾಗೆ ಗೊರೂರರ ವೇಷ ವಿಚಿತ್ರವಾಗಿದೆಯೆಂದು, ಅಪರಾಧಿಯೋ ಪ್ರಮುಖನೋ ವಿಚಿತ್ರ ಪ್ರಾಣಿಯೋ ಎಂಬಂತೆ ಗೊರೂರರನ್ನು ಕಂಡು ವಿದ್ಯಾರ್ಥಿಗಳು ಭಯಗೊಂಡರು. | |
| 13. | ಶಾಲೆಗೆ ಹೋದ ಗೊರೂರರನ್ನು ಅವರ ವಿಶೇಷವಾದ ಉಡುಗೆಯನ್ನು ಅವುಗಳಲ್ಲಿನ ಬಣ್ಣ ಹೊಳಪುಗಳನ್ನು ಕಂಡು ಉಪಾಧ್ಯಾಯರು ಹಾಗೂ ಹುಡುಗರೆಲ್ಲಾ ಒಂದೇ ಉಸಿರಿಗೆ ನಕ್ಕರು ಪೈಡ್ ಪೈಪರ್, ಸಾಂತಾಕ್ಲಾಸ್ ಎಂದೆಲ್ಲಾ ಕೂಗಿದರು. ಉಪಾಧ್ಯಾಯರೊಬ್ಬರು ನಿಮ್ಮ ಉಡುಪು ವಿಚಿತ್ರವಾಗಿದೆ. ಕುಳಿತುಕೊಳ್ಳಿ ಏನಾಗಬೇಕು ? ನಿಮಗೆ ಚಳಿಯಾಗುವುದಿಲ್ಲವೆ ? ನೀವು ಎಲ್ಲಿಂದ ಬಂದಿರುವಿರಿ ? ಈ ಎಲ್ಲಾ ಪ್ರಶ್ನೆ ಹಾಗೂ ಅವಾಂತರದಿಂದ ಗೊರೂರರು ಶಾಲೆಗೆ ಹೋದ ಉದ್ದೇಶವನ್ನೇ ಮರೆತರು. | |
| 14. | ಜೈನಧರ್ಮದ ರಕ್ಷಣೆ ಮತ್ತು ಸುಧಾರಣೆಗಾಗಿ ಬುಕ್ಕರಾಯನು ಜೈನ ಮತ್ತು ವೈಷ್ಣವ ಧರ್ಮಗಳೆರಡೂ ಒಂದೇ ಇವುಗಳಲ್ಲಿ ಯಾವುದೇ ಭೇದವಿಲ್ಲ, ಈರ್ವರೂ ಪರಸ್ಪರ ಗೌರವಿಸುವುದು. ಶ್ರೀ ತಿರುಮಲೆ ತಾತಯ್ಯನವರ ನೇತೃತ್ವದಲ್ಲಿ ಶ್ರವಣ ಬೆಳಗೊಳದಲ್ಲಿ ನಾಡಿನಲ್ಲಿರುವ ಜೈನ ಬಸದಿಗಳಿಗೆ ವೈಷ್ಣವರಿಂದ ಶಾಸನವನ್ನು ಹಾಕಿಸಿ, ಜೈನರು ಪ್ರತಿ ವರ್ಷ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಬಾಗಿಲು ಕಂದಾಯವಾಗಿ ಮನೆ ಮನೆಗೆ ಒಂದು ಹಣ ಕೊಟ್ಟು ಆ ಹೊನ್ನಿನಿಂದ ದೇವರ ಅಂಗರಕ್ಷೆಗಾಗಿ ಇಪ್ಪತ್ತು ಆಳುಗಳನ್ನು ನೇಮಿಸಿ ಉಳಿದ ಹೊನ್ನಿನಿಂದ ಜೀರ್ಣಗೊಂಡ ಬಸದಿಗಳಿಗೆ ಸುಣ್ಣ ಬಳಿಯಲು ವ್ಯವಸ್ಥೆ ಮಾಡಿ ಜೀರ್ಣೋದ್ಧಾರ ಮಾಡಿಸುತ್ತಾನೆ ಹಾಗೆಯೇ ಈ ಕಟ್ಟಳೆಯು ಸೂರ್ಯ ಚಂದ್ರರಿರುವ ತನಕ ಅನುಸರಿಸಿಕೊಂಡು ಹೋಗುವಂತೆ ಆಜ್ಞಾಪಿಸುತ್ತಾನೆ. | |
| 15. | ಹುಡುಕಿದರೂ ಜಗತ್ತಿನಲ್ಲೇ ಕರ್ನಾಟಕದ ಈ ಮಾದರಿ ಬಹುಶಃ ಎಲ್ಲೂ ಸಿಗುವುದಿಲ್ಲವೇನೋ! ಈ ವಚನ ಧರ್ಮವನ್ನು ಜಾತೀಯ ಬಚ್ಚಲಿನಿಂದ ಮೇಲೆತ್ತಿ ರಕ್ಷಿಸಿದರೆ ಜಗತ್ತಿಗೇ ಇದು ಬೆಳಕಾಗಬಹುದೇನೋ. ಇದು ಜಾತಿಯಾದರೆ ಕೆಟ್ಟ ಜಾತಿ; ಧರ್ಮವಾದರೆ ಮಹೋನ್ನತ ಧರ್ಮ. | |
| 16. | ೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಅನಂತರ ಭಾರತೀಯರ ಮೇಲೆ ನಿಶ್ಶಸ್ತ್ರೀಕರಣದ ಶಾಸನವನ್ನು ಹೊರಡಿಸಿದರು. ಈ ಶಾಸನದ ಪ್ರಕಾರ ಸರ್ಕಾರದ ಅನುಮತಿಯಿರದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಈ ಶಾಸನವನ್ನು ವಿರೋಧಿಸಿ ಆಯುಧಗಳನ್ನು ನೀಡದೆ ಹಲಗಲಿಯ ರಾಮ ಬಾಲ ಹನುಮ ಜಡಗ ಇವರ ನೇತೃತ್ವದಲ್ಲಿ ಹಲಗಲಿಯ ಬೇಡರು ದಂಗೆಯೆದ್ದರು. | |
| 17. | ‘ಉರ್ವಿಯಲ್ಲಿ (ಭೂಮಿಯಲ್ಲಿ) ಕೌಶಲ್ಯೆಯು ಮಗ ರಾಮನೊಬ್ಬನೇ ವೀರನು ಆತನ ಅಶ್ವಮೇಧ ಯಾಗದ ಕುದುರೆಯಿದು. ಶಕ್ತಿಸಂಪನ್ನರಾದವರು ಎದುರಿಸಿ ಯುದ್ಧ ಮಾಡುವ ಶಕ್ತಿಯುಳ್ಳವರು ಯಾರಾದರೂ ಕುದುರೆಯನ್ನು ತಡೆದು ಕಟ್ಟಿ ಯುದ್ಧ ಮಾಡಲಿ’ ಎಂದು ಬರೆದಿತ್ತು. | |
| 18. | ಬಲಿಷ್ಠರಾದ, ಶೂರರಾದ ದೊರೆಗಳು ಶ್ರೀರಾಮನ ಹೆಸರನ್ನು ಕೇಳಿ ಹೆದರಿ ಆತನ ಯಜ್ಞಾಶ್ವವನ್ನು ತಡೆಯದೆ ಅದಕ್ಕೆ ನಮಸ್ಕರಿಸಿ ಮುಂದೆ ಬಿಡಲು ಹೀಗೆ ಯಜ್ಞಾಶ್ವವು ಚಲಿಸುತ್ತ ಆ ಸುಂದರವಾದ ಕುದುರೆಯು ವಾಲ್ಮೀಕಿಯ ನಿಜಾಶ್ರಮದ ಉಪವನಕ್ಕೆ ಅಥವಾ ಉದ್ಯಾನವನಕ್ಕೆ ಬಂದಿತು. | |
| 19. | ವಿಜ್ಞಾನ ಮತ್ತದರ ಬಳಕೆ ಹಾಗೂ ವೈಜ್ಞಾನಿಕ ಮನೋಧರ್ಮವನ್ನು ಪಡೆದು ಕಾರ್ಯ ಪ್ರವೃತ್ತರಾದಾಗ ಮಾತ್ರ ಬಡತನ ನಿರ್ಮೂಲನೆ ಮತ್ತು ಶೋಷಣೆಗಳ ನಾಶ ಸಾಧ್ಯ. ಅದು ಪ್ರಗತಿ ವಿರೋಧಿ ಸಿದ್ಧಾಂತಗಳನ್ನೂ ಸ್ವಹಿತಾಸಕ್ತಿಯನ್ನೂ ದೂರ ಮಾಡಬಲ್ಲುದು. ವಿಜ್ಞಾನಿಗಳಾದವರಿಗೆ ವಿಜ್ಞಾನ ಜೀವನೋಪಾಯಕ್ಕೆ ಮಾರ್ಗವಾಗಿರದೆ ಅದರಲ್ಲಿಯೇ ಜೀವಂತ ನಂಬಿಕೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 20. | ಕಲ್ಲಿನ ಮೇಲಿಟ್ಟು ಕುಕ್ಕುವುದಲ್ಲ; ಒಗೆಯುವುದಲ್ಲ; ಬಡಿಯುವುದಲ್ಲ. ನೀರಿನಲ್ಲಿ ಸೆಳೆಯುವುದಲ್ಲ ಅಂದರೆ ನೀರಿನಲ್ಲಿ ಮುಳುಗಿಸಿ ಜಾಲಿಸುವುದಲ್ಲ ಆದರೆ, ಅದನ್ನು ನೋಡಿದರೆ ಬಿಳಿಯಾದ, ಶುಭ್ರವಾದ ಮಡಿ ವಸ್ತ್ರದಂತಿರುತ್ತದೆ. ಹಾಗಾದರೆ ಅದು ಏನು ? ಎಂಬುದು ಕೊಕ್ಕರೆ ಎಂಬ ಅರ್ಥ ಬರುವ ಒಗಟಾಗಿದೆ. | |
| | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | $4 \times 3 = 12$ |
| | ಕವಿ ಆಕರ ಮತ್ತು ಆಯ್ಕೆ | 1 ಅಂಕ |
| | ಸಂದರ್ಭ | 1 ಅಂಕ |
| | ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 21. | "ತಾಯಿ ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ"<br>ಪ್ರಸ್ತುತ ವಾಕ್ಯವನ್ನು ಪು.ತಿ.ನ. ವಿರಚಿತ 'ಶಬರಿ' ಗೀತನಾಟಕವನ್ನು ಶ್ರೀರಂಗ ಮತ್ತು ನಾ. ಕಸ್ತೂರಿ ಸಂಪಾದಿಸಿರುವ 'ಏಕಾಂಕ ನಾಟಕ'ಗಳು ಎಂಬ ಕೃತಿಯಿಂದ ಆರಿಸಿದ 'ಶಬರಿ' ಎಂದ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಶಬರಿಯು ಶ್ರೀರಾಮನ ಬರವನ್ನೇ ನಿರೀಕ್ಷಿಸುತ್ತಾ, ದಶರಥನ ಪುತ್ರ ಸಾಧು ಜನರ ಮಿತ್ರ, ಧೀರ, ಶೂರ, ವೀರ, ಗಂಭೀರ ಸದ್ಗುಣಸಾರ ಬಿಲ್ಲ ಹಿಡಿದು ಸಾಮ್ಯನಂತೆ ಕಾಣುವೆ. ಅರಸುತನವನ್ನು ತೊರೆದು ತಮ್ಮನೊಡನೆ ಬನಕೆ ಬಂದಿರುವ ರಾಮನನ್ನು ಎಂದು ಕಾಂಬೆನೋ ? ಎಂದು ಕಟ್ಟಿದ ಮಾಲೆಗೆ ಮುದ್ದಿಕ್ಕುವ ಸಂದರ್ಭದಲ್ಲಿ ಬಾಗಿಲ ಬಳಿನಿಂತು ರಾಮನು ಈ ಮಾತನ್ನು ಹೇಳುತ್ತಾನೆ.<br>ಸೀತೆಯಿಲ್ಲದ ರಾಮ, ಬಳಲಿದ ಮನಸ್ಸು ವಿರಹದ ತಾಪ ಆಶ್ರಯಕ್ಕಾಗಿ ಪ್ರಾರ್ಥಿಸುವ ಸಂದರ್ಭ ಸ್ವಾರಸ್ಯಕರವಾಗಿದೆ. | |
| 22. | "ನಾನು ಮುಖ ಮೇಲಾಗಿ ಬಿದ್ದೀದ್ದೇನೆ"<br>ಪ್ರಸ್ತುತ ವಾಕ್ಯವನ್ನು ಎ.ಎನ್. ಮೂರ್ತಿರಾವ್ ವಿರಚಿತ 'ಸಮಗ್ರ ಲಲಿತ ಪ್ರಬಂಧಗಳು' ಸಂಕಲನದಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಗಟ್ಟಿ ಮನಸ್ಸಿನ ಶಾನುಭೋಗರು ಹುಲಿಯಿಂದ ಬಿಡುಗಡೆ ಹೊಂದಿದೆ ಮೇಲೆ ಅದರ ಮನಸ್ಸನ್ನೆಲ್ಲಾ ಒಂದು ವಿಸ್ಮಯ ಆವರಿಸಿತ್ತು ತಾವು ಉಳಿದದ್ದು ಹೇಗೆ ? ನಿಸ್ಸಹಾಯಕರಾಗಿ ಬಿದ್ದಿದ್ದಾಗ ಹುಲಿ ತಮ್ಮನ್ನು ಎಳೆದುಕೊಂಡು ಹೋಗಲಿಲ್ಲವೇಕೆ ? ಎಂದು ಯೋಚಿಸಿ ಗಾಡಿಯವರನ್ನು ಕೇಳುವ ಸಂದರ್ಭದಲ್ಲಿ ಶಾನುಭೋಗರು ಈ ಮಾತನ್ನು ಹೇಳುತ್ತಾರೆ.<br>ಕೊನೆಗೂ ಶಾನುಭೋಗರ ಛಲ, ಹುಲಿಯ ಪ್ರಾಮಾಣಿಕತೆ ಹಾಗೂ ಕುಲಧರ್ಮ ಹಾಗೂ ಅದನ್ನು ಮೆಚ್ಚಿದ ಶಾನುಭೋಗರ ಉದಾರ ಹೃದಯ ಸಂಪನ್ನತೆ ಸ್ವಾರಸ್ಯಕರವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 23. | "ಮಾರಿಗೌತಣವಾಯ್ತು ನಾಳಿನ ಭಾರತವು"<br>ಪ್ರಸ್ತುತ ವಾಕ್ಯವನ್ನು ಕುಮಾರವ್ಯಾಸ ವಿರಚಿತ 'ಕರ್ಣಾಟಭಾರತ ಕಥಾಮಂಜರಿ' ಕಾವ್ಯದ 'ಉದ್ಯೋಗ ಪರ್ವದಿಂದ' 'ಕೌರವೇಂದ್ರನ ಕೊಂದ ನೀನು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಕೃಷ್ಣನಿಂದ ತನ್ನ ಜನ್ಮವೃತ್ತಾಂತವನ್ನು ಅರಿತ ಕರ್ಣ ಚಿಂತೆಗೀಡಾಗುತ್ತಾನೆ. ವೀರ ಕೌರವರಾಯನೇ ನನ್ನ ದಾತಾರ, ಆತನು ಆದಂತೆಯೇ ಆಗುತ್ತೇನೆ. ನಾಳಿನ ಯುದ್ಧದಲ್ಲಿ ನನ್ನ ಶೌರ್ಯ ಸಂಪನ್ನತೆಯನ್ನು ತೋರಿಸುತ್ತೇನೆಂದು ಹೇಳುವ ಸಂದರ್ಭದಲ್ಲಿ ಕರ್ಣನು ಈ ಮಾತನ್ನು ಹೇಳುತ್ತಾನೆ.<br>ಸ್ವಾಮಿನಿಷ್ಠೆಗೆ ಬದ್ಧನಾದ ಕರ್ಣ ಪ್ರಲೋಭನೆಗೆ ಒಳಗಾಗದೆ ಅಸಹಾಯಕನಾದ ಸ್ಥಿತಿಯಲ್ಲಿ, ನೋವು ಸಂಕಟದಲ್ಲಿ ಬಳಲುವ ಕರ್ಣನ ವ್ಯಕ್ತಿತ್ವದ ಹಿರಿಮೆ ಸ್ವಾರಸ್ಯಕರವಾಗಿದೆ. | |
| 24. | "ಜೀವಗಳು ಶವವಾದುವು"<br>ಪ್ರಸ್ತುತ ವಾಕ್ಯವನ್ನು ದು. ಸರಸ್ವತಿ ವಿರಚಿತ 'ಹೆಣೆದರೆ ಜೇಡನಂತೆ' ಎಂಬ ಕವನ ಸಂಕಲನದಿಂದ ಆಯ್ದ ಸಂಕಟಕೆ ಗಡಿಯಿಲ್ಲ ಎಂಬ ಕವಿತೆಯಿಂದ, ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಬುದ್ಧಿಶಕ್ತಿ ಮತ್ತು ಮಾತಿನ ಶಕ್ತಿಯಿಂದ ಮೇಲಿನವನೆಂದುಕೊಂಡಿರುವ ಮಾನವ ತಾನೇ ಸರ್ವಾಧಿಕಾರಿಯೆಂದು ಭ್ರಮಿಸಿ ಅಹಂಕಾರದಿಂದ ಗಡಿಯನ್ನು ನಿರ್ಮಿಸಿಕೊಂಡು ಭೇದ ಭಾವದ ಅಸಮಾನತೆಯನ್ನು ಸೃಷ್ಟಿಸಿದ್ದಾನೆ. ಇದರಿಂದಾದ ಕಾದಾಟದಲ್ಲಿ ಎಷ್ಟೋ ಜೀವಗಳು ಶವವಾದವು ಎಂದು ಕವಯತ್ರಿ ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.<br>ಅಂಧಾನುಕರಣೆಗೆ, ದುರಭಿಮಾನ, ಸ್ವಾರ್ಥಕ್ಕೆ ಬಲಿಯಾದ ಮಾನವ ಭ್ರಮೆಗೊಳಗಾಗಿ ತಾನೂ ನೋವನ್ನು ಅನುಭವಿಸಿ ಇತರರನ್ನೂ ಶವವಾಗಿಸುವ ನೋವಿನ ಪರಿ ಸ್ವಾರಸ್ಯಕರವಾಗಿದೆ. | |
| | **ಕವಿ / ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ವಿವರಿಸಿ ಬರೆಯುವುದು :** | 2 × 3 = 6 |
| | ಸ್ಥಳ ಮತ್ತು ಕಾಲ | 1 ಅಂಕ |
| | ಕೃತಿ ಮತ್ತು ಪ್ರಶಸ್ತಿ | 1 ಅಂಕ |
| | ವಾಕ್ಯರೂಪದ ವಿವರಣೆಗೆ ಮತ್ತು ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 25. | ದ.ರಾ. ಬೇಂದ್ರೆ :<br>'ಅಂಬಿಕಾತನಯದತ್ತ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಧಾರವಾಡದವರು. ಇವರ ಕಾಲ ಕ್ರಿ.ಶ. ೧೮೯೬. ಇವರ ಕೃತಿಗಳು ಗರಿ, ಕೃಷ್ಣಕುಮಾರಿ, ನಾದಲೀಲೆ, ಮೇಘದೂತ, ಗಂಗಾವತರಣ ಇವರ ಅರಳು–ಮರಳು ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ, ನಾಕುತಂತಿ ಕೃತಿಗೆ 'ಭಾರತೀಯ ಜ್ಞಾನಪೀಠ ಪ್ರಶಸ್ತಿ' ಹಾಗೂ ಭಾರತ ಸರ್ಕಾರದ ಪದ್ಮಶ್ರೀಗೆ ಭಾಜನರಾಗಿದ್ದಾರೆ. | |



[ Turn over

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 26. | ದುರ್ಗಸಿಂಹ :<br>ದುರ್ಗಸಿಂಹ ಕಿಸುಕಾಡು ನಾಡಿನ ಸಯ್ಯಡಿಯವನು. ಈತನ ಕಾಲ ಕ್ರಿ.ಶ. ೧೦೩೧. ಒಂದನೆಯ ಜಗದೇಕಮಲ್ಲನ ಆಸ್ಥಾನದಲ್ಲಿ ದಂಡನಾಯಕನೂ ಸಂಧಿವಿಗ್ರಹಿಯೂ ಆಗಿದ್ದನು. ಮತಧರ್ಮ ಸಮನ್ವಯಕಾರನಾದ ಈತ ಸಯ್ಯಡಿಯಲ್ಲಿ ಹಲವಾರು ಹರಿಹರಭವನಗಳನ್ನು ನಿರ್ಮಿಸಿದನೆಂದು ತಿಳಿದುಬಂದಿದೆ. 'ಪಂಚತಂತ್ರ' ಈತನು ಬರೆದ ಚಂಪೂಕಾವ್ಯವಾಗಿದೆ. | |
| | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)** | 1 × 4 = 4 |
| 27. | ಕಲುಷಿತವಾದೀ ನದೀಜಲಗಳಿಗೆ<br>ಮುಂಗಾರಿನ ಮಳೆಯಾಗೋಣ<br>ಬರಡಾಗಿರುವೀ ಕಾಡುಮೇಡುಗಳ<br>ವಸಂತವಾಗುವ ಮುಟ್ಟೋಣ<br>**ಅಥವಾ**<br>ಮತಗಳೆಲ್ಲವೂ ಪಥಗಳು ಎನ್ನುವ<br>ಹೊಸ ಎಚ್ಚರದೊಳು ಬದುಕೋಣ<br>ಭಯ–ಸಂಶಯದೊಳು ಕಂದಿದ ಕಣ್ಣೋಳು<br>ನಾಳಿನ ಕನಸನು ಬಿತ್ತೋಣ. | |
| | **ಪದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು : (ಪ್ರತಿ ಪ್ರಶ್ನೆಯ ಸರಿಯುತ್ತರಕ್ಕೂ 1 ಅಂಕ)** | 4 × 1 = 4 |
| 28. | ಅ) ಬಸವಣ್ಣನವರು ಮನಸ್ಸನ್ನು ಸೊಣಗನಿಗೆ (ನಾಯಿಗೆ) ಹೋಲಿಸಿದ್ದಾರೆ.<br>ಆ) ಮನಸ್ಸು ಮುನ್ನಿನ ಸ್ವಭಾವವನ್ನು ಬಿಡಲೊಲ್ಲದು; ಸದಾ ವಿಷಯದ ಕಡೆಗೇ ಹರಿಯುತ್ತಿರುತ್ತದೆ. ಅನುದಿನವೂ ನಿಮ್ಮನ್ನು ನೆನೆಯುವುದಿಲ್ಲ.<br>ಇ) ಕೂಡಲ ಸಂಗಮದೇವನನ್ನು ಆತನ ಚರಣವನ್ನು ಸದಾ ನೆನೆಯುವಂತೆ ಕರುಣಿಸು, ನಿನ್ನಲ್ಲಿ ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ.<br>ಈ) ಮಚ್ಚಿಕೊಂಡ ಅಂಶಗಳು :<br>– ಚಂಚಲಯುತವಾದ ಮನಸ್ಸನ್ನು ನಾಯಿಗೆ ಹೋಲಿಸಿರುವುದು.<br>– ವಿಷಯಗಳಲ್ಲಿ ಸದಾ ಹರಿದಾಡುವ ಮನಸ್ಸನ್ನು ಸುಡು ಸುಡು ಎಂದು ಹೇಳಿರುವುದು.<br>– ಸದಾ ಭಗವಂತನನ್ನೇ ನೆನೆಯುವಂತೆ ಸೆರಗೊಡ್ಡಿ ಬೇಡಿಕೊಂಡಿರುವ ಬಗೆ.<br>(ಈ ಮೂರು ಅಂಶಗಳಲ್ಲಿ ಯಾವುದಾದರೊಂದನ್ನು ಬರೆದರೂ ಪೂರ್ಣಾಂಕವನ್ನು ನೀಡುವುದು) | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | 2 × 4 = 8 |
| 29. | ವಿಶ್ವೇಶ್ವರಯ್ಯನರು 'ಕೈಗಾರಿಕೀಕರಣ ಇಲ್ಲವೆ ಅವನತಿ' ಎಂಬ ಘೋಷಣೆಯ ಮೂಲಕ ಭದ್ರಾವತಿಯಲ್ಲಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಸ್ಥಾಪನೆ. ಹೆಂಚಿನ ಕಾರ್ಖಾನೆ, ಮೂಳೆ ಮತ್ತು ಗೊಬ್ಬರ ತಯಾರಿಕಾ ಸ್ಥಾವರ, ಸಕ್ಕರೆ ಕಾರ್ಖಾನೆ, ಔಷಧಿ ತಯಾರಿಕಾ ಘಟಕ ಗಂಧದ ಎಣ್ಣೆ, ಬೆಂಕಿಕಡ್ಡಿ ಹಾಗೂ ಕಾಗದದ ಕಾರ್ಖಾನೆ, ಸೋಪು ಮತ್ತು ಲೋಹ ತಯಾರಿಕೆ, ಕಲೆ ಮತ್ತು ಕರಕುಶಲ ಡಿಪೋ, ಕೃಷ್ಣರಾಜೇಂದ್ರ ಬಟ್ಟೆ ಗಿರಣಿ, ಕಾಗದದ ತಿರುಳು, ರಟ್ಟು, ಪೆನ್ಸಿಲ್ ಮತ್ತು ಪೀಠೋಪಕರಣಗಳ ತಯಾರಿಕಾ ಘಟಕಗಳನ್ನು ಸ್ಥಾಪಿಸಿದರು.<br><br>ರಾಜ್ಯದ ಆರ್ಥಿಕ ಚಟುವಟಿಕೆಗಳಿಗೆ ಭದ್ರ ಬುನಾದಿ ಹಾಕುವ ಉದ್ದೇಶದಿಂದ ೧೯೧೩ ರಲ್ಲಿ ಮೈಸೂರು ಬ್ಯಾಂಕ್ ಸ್ಥಾಪನೆ, ಮೈಸೂರು ನಗರವನ್ನು ಅಭಿವೃದ್ಧಿಪಡಿಸುವ ದಿಸೆಯಲ್ಲಿ ಮೈಸೂರಿನ ಹೊಸ ಅರಮನೆ, ಸಿ. ರಂಗಾಚಾರ್ಲು ಸ್ಮಾರಕ ಭವನ, ಅರಮನೆ ವಿಸ್ತರಣೆಗೆ ಕೃಷ್ಣರಾಜೇಂದ್ರ ಆಸ್ಪತ್ರೆ, ಲಲಿತ ಮಹಲ್, ಶಿವನ ಸಮುದ್ರದ ಜಲ ವಿದ್ಯುತ್ ಯೋಜನೆ, ಕಾವೇರಿ ನದಿಗೆ ಕನ್ನಂಬಾಡಿ ಅಣೆಕಟ್ಟು ಕನ್ನಡ ಸಾಹಿತ್ಯ ಪರಿಷತ್ತು ಇನ್ನೂ ಹಲವಾರು ಸೇವೆಗಳಿಂದ ಅಂದಿನ ಮೈಸೂರು 'ಮಾದರಿ ಮೈಸೂರು ಎಂದೆನಿಸಲು ವಿಶ್ವೇಶ್ವರಯ್ಯನವರೇ ಕಾರಣರಾಗಿದ್ದಾರೆ'. "ಆದರ್ಶ ಪುರುಷರೊಬ್ಬರು ದಿವಾನರಾದದ್ದು ಮೈಸೂರು ಸಂಸ್ಥಾನದ ಪುಣ್ಯವೇ ಸರಿ" ಎಂದು ಜನರು ಹೊಗಳುತ್ತಿದ್ದುದ್ದು. ವಿಶ್ವೇಶ್ವರಯ್ಯನವರ ಸೇವಾ ಕಾರ್ಯಕ್ಕೆ ಹಿಡಿದ ಕನ್ನಡಿಯಾಗಿದೆ.<br><br>**ಅಥವಾ**<br><br>ಆಧುನಿಕ ಶಿಕ್ಷಣವೇ ಎಲ್ಲಾ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರವೆಂದು ನಂಬಿದ್ದರು. ಶಿಕ್ಷಣವು ಸಂಜೀವಿನಿ ಎಂಬುದನ್ನರಿತ ಸರ್ ಎಂ.ವಿ. ರವರು ಶಿಕ್ಷಣದಲ್ಲಿ ವಿವಿಧ ಯೋಜನೆಗಳನ್ನು ರೂಪಿಸಿದರು. ೧೯೧೩ ರಲ್ಲಿ ಪ್ರಾಥಮಿಕ ಶಿಕ್ಷಣ ನಿಬಂಧನೆಯನ್ನು ಜಾರಿಗೆ ತಂದರು. ಪ್ರೌಢಶಿಕ್ಷಣ ಶಾಲೆಗಳು ಮದ್ರಾಸ್ ವಿಶ್ವವಿದ್ಯಾನಿಲಯದ ನಿಯಂತ್ರಣಕ್ಕೆ ಒಳಪಟ್ಟಿದ್ದವು. ಇದನ್ನು ಬದಲಿಸಿ ಸಂಸ್ಥಾನವೇ ಪ್ರತ್ಯೇಕವಾದ ಪೌಢಶಿಕ್ಷಣದ ಅಂತಿಮ ಪರೀಕ್ಷೆ ನಡೆಸುವ ಯೋಜನೆಯನ್ನು ಆರ್ಥಿಕ ಪರಿಷತ್ತಿನ ಮೂಲಕ ರೂಪುಗೊಳಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು ಅದು ಕೆಲವೇ ಜನರ ಸೊತ್ತಾಗದೇ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮ ಸಿದ್ಧ ಹಕ್ಕಾಗಬೇಕು" ಎಂಬುದನ್ನು ಮನಗಂಡ ಸರ್ ಎಂ.ವಿ. ಯವರು ತಾಂತ್ರಿಕ ಮತ್ತು ವೃತ್ತಿಶಿಕ್ಷಣಕ್ಕೆ ಆದ್ಯತೆ ನೀಡಿದರು. ಬೆಂಗಳೂರಿನಲ್ಲಿ ಮೆಕಾನಿಕಲ್ ಎಂಜಿನಿಯರಿಂಗ್ ಶಾಲೆ ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗಳನ್ನು ಪ್ರಾರಂಭಿಸಿದರು. ಮಹಿಳಾ ಶಿಕ್ಷಣದ ಬಗ್ಗೆ ಸಹಾನುಭೂತಿ ಹೊಂದಿದ್ದ ಇವರು ಗೃಹ ಶಿಕ್ಷಣ ಶಾಲೆಗಳನ್ನು ಸ್ಥಾಪಿಸಿದರು. ವಿದ್ಯಾರ್ಥಿವೇತನ ನೀಡುವುದರ ಮೂಲಕ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದರು. ಭಾಷೆ, ಸಂಶೋಧನೆ, ಸಾಹಿತ್ಯ ಮತ್ತು ಓದುವ ಹವ್ಯಾಸವನ್ನು ಬೆಳೆಸುವ ದೃಷ್ಟಿಯಿಂದ ಗ್ರಂಥಾಲಯಗಳನ್ನು ಸ್ಥಾಪಿಸಿದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 30. | 'ಪುತ್ರಶೋಕಂ ನಿರಂತರಂ' ಎಂಬ ಮಾತು ಸತ್ಯಸ್ಯ ಸತ್ಯ. ತಂದೆತಾಯಿ ಮಕ್ಕಳ ಸಂಬಂಧ ಅಂತಃಕರಣ ಮಿಡಿಯುವಂತಹುದು. ಯುದ್ಧ ಅನಿವಾರ್ಯವೆನಿಸಿದರೂ ಮಕ್ಕಳನ್ನು ಕಳೆದುಕೊಂಡ ತಂದೆ ತಾಯಿಯ ದುಃಖ ತೀವ್ರವಾದುದು. ಭೀಷ್ಮ ದ್ರೋಣ ಕರ್ಣ ಶಲ್ಯರ ಸೇನಾಪತ್ಯದಲ್ಲಿ ಯುದ್ಧ ನಡೆದು ಹನ್ನೊಂದು ಅಕ್ಷೋಹಿಣಿ ಸೇನೆ ಹಾಗೂ ಕೌರವರ ತೊಂಬಂತ್ತೊಂಬತ್ತು ಮಕ್ಕಳನ್ನು ಕಳೆದುಕೊಂಡ ವೃದ್ಧ ದಂಪತಿಗಳಾದ ಧೃತರಾಷ್ಟ್ರ ಗಾಂಧಾರಿಯರ ದುಃಖ ಹೃದಯ ವಿದ್ರಾಯಕವಾದುದು. ರಣರಂಗದಲ್ಲಿ ಎದುರಾಗಿ ಚರಣಗಳಿಗೆ ನಮಿಸಿದ ಪ್ರಿಯ ಮಗನನ್ನು ಅಪ್ಪಿ ಮುದ್ದಾಡಿ. ಅಮೃತ ವರ್ಷಧಾರೆಯನ್ನೇ ಸುರಿಸುತ್ತ ಎಲ್ಲರೂ ಕೇಳಲಿ ಎಂದು ಧೃತರಾಷ್ಟ್ರನು ಹೀಗೆ ಹೇಳುತ್ತಾನೆ. ನನಗೂ ಪಾಂಡುವಿಗೂ ಯಾವುದೇ ಭೇದವಿಲ್ಲ ನಾವು ಭೂಮಿಯನ್ನು ಸಮನಾಗಿ ಹಂಚಿಕೊಂಡು ಆಳುತ್ತೇವೆ. ಈ ಯುದ್ಧವು ನಿನ್ನಿಂದಲೇ ಆಯಿತೆಂದರೆ ನೀನು ಕೋಪಗೊಳ್ಳುತ್ತೀಯೆ. ಗಂಗೆಯ ಹಿರಿಯ ಮಗನಾದ ಭೀಷ್ಮ ಘಟ ಸಂಭೂತನಾದ ದ್ರೋಣ ಕರ್ಣರಿಗೆ ಗೆಲ್ಲಲು ಅಸಾಧ್ಯನಾದ ಅರ್ಜುನನ್ನು ಕೋಪದಿಂದ ಎದುರಿಸಿ ಗೆಲ್ಲುವವರು ಯಾರಿದ್ದಾರೆ ? ಆದುದರಿಂದ ನೀನು ಸಂಧಿಗೆ ಒಪ್ಪಿಕೋ ಎಂದು ಹೇಳುತ್ತಾನೆ. ಉಳಿದಿರುವ ಒಬ್ಬ ಮಗನನ್ನಾದರೂ ಉಳಿಸಿಕೊಳ್ಳುವ ಉದ್ದೇಶದಿಂದ ಧೃತರಾಷ್ಟ್ರ ಗಾಂಧಾರಿಯರು ಯುದ್ಧ ಭೂಮಿಗೆ ಬಂದು ಕೌರವನನ್ನು ಸಂಧಿ ಮಾಡಿಕೊಳ್ಳಲು ಮನವೊಲಿಸುತ್ತಾರೆ.<br><br>***ಅಥವಾ***<br><br>ರಣರಂಗದಲ್ಲಿ ಎದುರಾದ ಮಾತಾಪಿತೃದ್ವಯರ ಚರಣಗಳಿಗೆ ನಮಿಸಿದ ದುರ್ಯೋಧನನನ್ನು ಅಪ್ಪಿ ಮುದ್ದಾಡುತ್ತ ಅಮೃತವರ್ಷಿಯನ್ನೇ ಹರಿಸುತ್ತ ಮಗನನ್ನು ಸಂಧಿಗಾಗಿ ಒಪ್ಪಿಸಲು ದೃತರಾಷ್ಟ್ರನು ಎನಗೂ ಪಾಂಡುವಿಗೂ ಯಾವುದೇ ಭೇದವಿಲ್ಲ ಭೂಮಿಯನ್ನು ಸಮನಾಗಿ ಹಂಚಿಕೊಂಡು ಆಳುತ್ತೇವೆ. ಪಾಂಡವರೂ ನಾನು ಹೇಳಿದಂತೆಯೇ ಕೇಳುತ್ತಾರೆ. ಈ ಯುದ್ಧವೂ ನಿನ್ನಿಂದಲೇ ಆಯಿತೆಂದರೆ ನೀನು ಕೋಪಿಸಿಕೊಳ್ಳತ್ತೀಯೆ. ಭೀಷ್ಮ, ದ್ರೋಣ, ಕರ್ಣರೇ ಗೆಲ್ಲಲು ಅಸಾಧ್ಯವಾದ ಅರ್ಜುನನನ್ನು ಕೋಪದಿಂದ ಎದುರಿಸಿ ಗೆಲ್ಲುವವರು ಯಾರಿದ್ದಾರೆ ? ಆದ್ದರಿಂದ ಸಂಧಿಗಾಗಿ ಒಪ್ಪಿಕೋ ಎನ್ನುತ್ತ ಹಗೆತನಕ್ಕೆ, ಮಿತ್ರತ್ವಕ್ಕೆ ಪ್ರೀತಿಗೆ ಆಶ್ರಯ ಮತ್ತು ಮನೆಯೆಂಬುದಿದೆಯೆ ? ನಾವು ಕೈಗೊಂಡ ಕಾರ್ಯದಿಂದಲೇ ಮಿತ್ರತ್ವ ಮತ್ತು ಶತ್ರುತ್ವಗಳು ಉಂಟಾಗುತ್ತವೆ. ಅರಸು ಮಕ್ಕಳಿಗಾಗಿ ಅರ್ಥಶಾಸ್ತ್ರದಲ್ಲಿ ಇದ್ನು ಹೇಳಿಲ್ಲವೆ ? ಇದನ್ನು ನೀನು ಯೋಚಿಸು ಮಗನೆ! ನೀನೊಬ್ಬನಿದರೆ ನಮಗೆ ಎಲ್ಲರೂ ಇದ್ದಂತೆಯೇ. ನಮಗೆ ಯಾವುದೇ ರೀತಿಯ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ದುಃಖವಿಲ್ಲ. ಅದು ಹೇಗೆಂದರೆ ಹಗಲಿನಲ್ಲಿ ಆಕಾಶದಲ್ಲಿ ಸೂರ್ಯನೊಬ್ಬನೇ ಸಾಲದೆ ? ಉಳಿದ ತಾರೆಗಳು ದೀವಿಗೆಗಳು ಉರಿದೊಡೇನು ? ಆರಿ ಹೋದರೆ ತಾನೆ ಏನು ? ಎನ್ನುತ್ತಾನೆ. | |
| | ಪಾಂಡವರು ನಾನು ಹೇಳಿದಂತೆಯೇ ಕೇಳುತ್ತಾರೆ ಎಂದೂ ನಮ್ಮ ಮಾತನ್ನು ಮೀರುವವರಲ್ಲ. ನೀನು ಹೇಳಿದಂತೆಯೇ ನಡೆದುಕೊಳ್ಳುತ್ತಾರೆ. ಅವರನ್ನು ನಾನು ಒಪ್ಪಿಸುತ್ತೇನೆ. ನೀನು ಸಂಧಿ ಮಾಡಿಕೋ ಎಂದು ಕೈ ಮುಗಿದು ಬೇಡಿಕೊಳ್ಳುತ್ತೇನೆ ಎನ್ನುತ್ತಾನೆ. | |
| | ಧೃತರಾಷ್ಟ್ರನ ಮಾತಿಗೆ ಬೆಂಬಲವಾಗಿ ಗಾಂಧಾರಿ ಕುರುಕುಲವೆಂಬ ಉದ್ಯಾನವನಕ್ಕೆ ಪವನ ನಂದನನೆಂಬ ಮದವೇರಿದ ಆನೆ ನುಗ್ಗಲು ಅಲ್ಲಿದ್ದ ಮರಗಳೆಲ್ಲಾ ಹಾಳಾಗಿ ಪುಣ್ಯ ವಶಾತ್ ಒಂದು ದೊಡ್ಡ ಮರವು ಉಳಿಯುವಂತೆ ನೀನು ಉಳಿದಿದ್ದೀಯ ಮುದುಕರೂ, ಕುರುಡರೂ ಎಂದು ಹೀಗಳೆಯದೆ ಮಗನೇ ನಿನ್ನ ತಂದೆಯ ಮಾತನ್ನು ಕೇಳು ಸಂಧಿಗಾಗಿ ಒಪ್ಪಿಕೋ ಎನ್ನುತ್ತಾಳೆ. | |
| | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು : (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | $2 \times 2 = 4$ |
| 31. | ಅ) ಗೃಹಸ್ಥಾಶ್ರಮ ಶ್ರೇಷ್ಠವೆಂದು ಕಾಳಿದಾಸ ಹೇಳಿಲ್ಲ. ಆತನು ಸೃಷ್ಟಿಸಿದ ಪಾತ್ರ ಅರಣ್ಯಕ ಮುನಿ ಗೃಹಸ್ಥಾಶ್ರಮ ಶ್ರೇಷ್ಠವೆನ್ನುತ್ತಾನೆ, ಏಕೆಂದರೆ ಗೃಹಸ್ಥಾಶ್ರಮವನ್ನು ಆಶ್ರಯಿಸಿದ ಅಂತರ್ಜೀವಿಯು ರಾಜಯೋಗದ ಮೂಲಕ ಹಾಗೂ ಕರ್ಮಯೋಗದ ಮೂಲಕ ತನ್ನ ಜೀವನದ ಪರಮ ಗುರಿಯನ್ನು ಸಾಧಿಸಲು ಸೂಕ್ತ ಮಾರ್ಗಗಳನ್ನು ತೆರೆದಿರುವುದರಿಂದ. | |
| | ಆ) ಅಂತರ್ಜೀವಿಯು ಸಮ್ಯಕ್ ದರ್ಶನದ ಸಮತೂಕವನ್ನು ಪಡೆಯದೆ ಅವನಿಗೆ ಬೇರೆ ದಾರಿಯೇ ಇಲ್ಲ ಏಕೆಂದರೆ ಅಂತರ್ಜೀವಿಯು ತನ್ನ ಅಂತಃ ಸಾಗರದಲ್ಲಿ ಮುಳುಗಿ ತಂದ ರತ್ನಗಳನ್ನು ಪರೀಕ್ಷಿಸುವ ರತ್ನರಸಿಕರು ಅವನ ಸುತ್ತಮುತ್ತ ಇರುತ್ತಾರೆ. ಹೆಜ್ಜೆ ಹೆಜ್ಜೆಗೂ ಅವನ ಪರೀಕ್ಷೆಯಾಗುತ್ತಿರುತ್ತದೆ. ತಪ್ಪಡಿಯಿಟ್ಟೊಡನೆಯೇ ತಲೆದಂಡ ಕಟ್ಟಬೇಕಾಗುತ್ತದೆ. ಒಮ್ಮೊಮ್ಮೆ ತಪ್ಪಿಲ್ಲದೆಯೂ ದಂಡವನ್ನು ತೆರಬೇಕಾಗುತ್ತದೆ. ಆದುದರಿಂದ ಸಮ್ಯಕ್‌ದರ್ಶನದ ಸಮತೂಕವನ್ನು ಪಡೆಯದೆ ಅವನಿಗೆ ಬೇರೆ ದಾರಿಯೇ ಇಲ್ಲ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಬಿ'** | |
| | **(ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 10 × 1 = 10 |
| 32. | (ಬಿ) ಜಶ್ತ್ವ ಸಂಧಿ | |
| 33. | (ಸಿ) ಕಡೆಗಣ್ಣು | |
| 34. | (ಡಿ) ವಾಕ್ಯವೇಷ್ಟನ ಚಿಹ್ನೆ | |
| 35. | (ಎ) ಮಿಶ್ರವಾಕ್ಯ | |
| 36. | (ಬಿ) ಸಾಮಾನ್ಯಾವ್ಯಯ | |
| 37. | (ಸಿ) ಪೋರ್ಚುಗೀಸಿನಿಂದ | |
| 38. | (ಬಿ) ಅನ್ವರ್ಥಕನಾಮ | |
| 39. | (ಸಿ) ವೃತ್ಯನುಪ್ರಾಸ | |
| 40. | (ಡಿ) ಸತ ಗಣ | |
| 41. | (ಬಿ) ಸಂಭಾವನಾರ್ಥಕ | |
| | **ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದ ಬರೆಯುವುದು (ಪ್ರತೀ ಸರಿಯುತ್ತರಕ್ಕೆ 1 ಅಂಕ) :** | 4 × 1 = 4 |
| 42. | ದ್ವಿರುಕ್ತಿ | |
| 43. | ಕಜ್ಜ | |
| 44. | ದುಂಬಿ | |
| 45. | ತದ್ಧಿತಾಂತ ಭಾವನಾಮ | |
| | **ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :** | |
| | ಪ್ರಸ್ತಾರ ಹಾಕುವುದು | 1 ಅಂಕ |
| | ಗಣ ವಿಭಾಗಿಸುವುದು | 1 ಅಂಕ |
| | ಛಂದಸ್ಸಿನ ಹೆಸರು ಬರೆಯುವುದು | 1 ಅಂಕ |
| | ಒಟ್ಟು | 3 ಅಂಕಗಳು |
| 46. | ೩ ೪ ೩ ೪<br>U U U \| — U U \| — U \| — U U<br>ಎ ಡ ದ \| ಮೈ ಯ ಲಿ \| ಕೌ ರ \| ವೇಂ ದ್ರ ರ<br>೩ ೪ ೩ ೪<br>U U U \| U U U U \| — U \| U U U U<br>ಗ ಡ ಣ \| ಬ ಲ ದ ಲಿ \| ಪಾಂ ಡು \| ತ ನ ಯ ರ<br>೩ ೪ ೩ ೪ ೩ ೪ ಗು<br>U U U \| U U U U \| — U \| — U U \| — U \| — U U \| —<br>ಗ ಡ ಣ \| ವಿ ದಿ ರ ಲಿ \| ಮಾ ದ್ರ \| ಮಾ ಗ ಧ \| ಯಾ ದ \| ವಾ ದಿ ಗ \| ಳು<br>ಈ ಪದ್ಯವು ಮಾತ್ರಾಗಣಾಧಾರಿತ ಭಾಮಿನಿಷಟ್ಪದಿಯಲ್ಲಿ ರಚಿತವಾಗಿದೆ. | |
| | ***ಅಥವಾ*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — U U U \| U U U U \| — U — \| — U — \|<br>ಎ ತ್ತ ಣ ತು \| ರಂ ಗ ಮಿ ದು \| ಪೊ ಕ್ಕು ಪೊ \| ದೋ ಟ ಮಂ \|<br><br>— U U U \| U U U — \| — U U U \| — U — \|<br>ತೊ ತ್ತ ಳ ದು \| ಳಿ ದು ದು ವಾ \| ಲ್ಮೀ ಕಿ ಮು ನಿ \| ನಾ ಥ ನೇ \|<br><br>U U U \| — U — \| U U U — \| U U — U \| — U — \| U U U — \| — (ಗು)<br>ಪೊ ತ್ತು ಮಾ \| ರ್ಕೈ ವು ದೆಂ \| ದೆ ನ ಗೆ ನೇ \| ಮಿ ಸಿ ಪೋ ದ \| ನ ಬ್ಧಿ ಪಂ \| ಕ ರೆ ಸ ಲಾ \| ಗಿ<br><br>ಈ ಪದ್ಯವು ಮಾತ್ರಗಣಾಧಾರಿತ 'ವಾರ್ಧಕ ಷಟ್ಪದಿ'ಯಲ್ಲಿ ರಚಿತವಾಗಿದೆ. | |
| | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | 1 × 3 = 3 |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಬರೆದು, ಸಮನ್ವಯಿಸುವುದು | 2 ಅಂಕ |
| | ಒಟ್ಟು | 3 ಅಂಕಗಳು |
| 47. | 'ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು'<br>*ಉಪಮೇಯ* : ನುಡಿ (ಮಾತು)<br>*ಉಪಮಾನ* : ಸ್ಫಟಿಕದ ಶಲಾಕೆ<br>*ಉಪಮಾ ವಾಚಕ* : ಅಂತೆ<br>*ಸಮಾನ ಧರ್ಮ* : ಮಾತಿನಲ್ಲಿ ದೃಢತೆ (ಗಟ್ಟಿತನ)<br>*ಅಲಂಕಾರ :* ಉಪಮಾಲಂಕಾರ<br>*ಸಮನ್ವಯ* : ಇಲ್ಲಿ ಉಪಮೇಯವಾದ ನುಡಿಯನ್ನು ಉಪಮಾನವಾದ ಸ್ಫಟಿಕದ ಶಲಾಕೆಗೆ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾ ಅಲಂಕಾರವಾಗಿದೆ.<br><br>***ಅಥವಾ***<br><br>'ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷಬೆರೆದಂತೆ'<br>*ಉಪಮೇಯ* : ಸತಿಪತಿಗಳೊಂದಾಗದವನ ಭಕ್ತಿ<br>*ಉಪಮಾನ* : ಅಮೃತದೊಳುವಿಷ (ಅಮೃತದಲ್ಲಿರುವ ವಿಷ)<br>*ಉಪಮಾ ವಾಚಕ* : ಅಂತೆ<br>*ಸಮಾನ ಧರ್ಮ* : ಸಾಮರಸ್ಯವಿಲ್ಲದಿರುವಿಕೆ<br>*ಅಲಂಕಾರದ ಹೆಸರು :* ಉಪಮಾಲಂಕಾರ<br>ಸಮನ್ವಯ : ಇಲ್ಲಿ ಉಪಮೇಯವಾದ ಸತಿಪತಿಗಳೊಂದಾಗದವನ ಭಕ್ತಿಯನ್ನು ಉಪಮಾನವಾದ ಅಮೃತದೊಳು ವಿಷ ಬೆರೆಸಿರುವುದಕ್ಕೆ ಹೋಲಿಸಿ ವರ್ಣಿಸಲಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಸಿ'** | |
| | **(ವಾಕ್ಯರಚನೆ ಪತ್ರಲೇಖನ ಹಾಗೂ ಬರೆವಣಿಗೆ ಕೌಶಲ)** | |
| 48. | **ಗಾದೆಯನ್ನು ವಿಸ್ತರಿಸಿ ಬರೆಯುವುದು :** | 1 × 3 = 3 |
| | ಗಾದೆಯ ಮಹತ್ತ್ವದ ವಿವರಣೆ | 1 ಅಂಕ |
| | ಗಾದೆಯ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ ಮತ್ತು ಉದಾಹರಣೆ | 1 ಅಂಕ |
| | ಒಟ್ಟು | 3 ಅಂಕಗಳು |
| 49. | **ಪತ್ರ ಲೇಖನ ಬರೆಯುವುದು :** | 1 × 5 = 5 |
| | ಇಂದ, ಗೆ, ವಿಷಯ ಸಂಬೋಧನೆ, | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ಭಾಷಾಶೈಲಿ | 1 ಅಂಕ |
| | ಒಟ್ಟು | 5 ಅಂಕಗಳು |
| 50. | **ಪ್ರಬಂಧ ಬರವಣಿಗೆ :** | |
| | ಪ್ರಸ್ತಾವನೆ / ಪೀಠಿಕೆ | 1 ಅಂಕ |
| | ವಿಷಯದ ಬೆಳವಣಿಗೆ | 2 ಅಂಕಗಳು |
| | ಉಪಸಂಹಾರ / ಮುಕ್ತಾಯ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |